ಇಂದು ದಿನಾಂಕಃ 09.04.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ವಾದಿಯ ಪರ ಶ್ರೀ ಪಿ ಹೆಚ್ ಪಿ ವಕೀಲರಿಂದಃ

ದಾವೇದ ಎಲ್ಲಾ ಆಸ್ತಿಗಳು ವಾದಿ ಮತ್ತು 1 ನೇ ಪ್ರತಿವಾದಿಯ ಸಮೂಹಿಕ ಮಾಲ್ಕಿ ಆಸ್ತಿಗಳು ಎಂದರೆ ಸರಿ. ಸದರಿ ಆಸ್ತಿಗಳಲ್ಲಿ ಇವರೆಗೂ ಹಿಸ್ಸೆ ಆಗಿಲ್ಲ ಎಂದರೆ ಸರಿಯಲ್ಲ. ಇವರೆಗೂ ವಾದಿಗೆ ಹಿಸ್ಸೆ ಬಂದಿಲ್ಲ ಎಂದರೆ ಸಾಕ್ಷಿಯು ವಾದಿಯು ತನ್ನ ಹಿಸ್ಸೆ ಬದಲಾಗಿ ನನ್ನ ತಂದೆಯ ಬಳಿ 50 ಸಾವಿರ ರೂ ಹಣವನ್ನು ಪಡೆದುಕೊಂಡು ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ಸಹಿ ಮಾಡಿ ನನ್ನ ತಾಯಿಯ ಹೆಸರಿಗೆ ಜಮೀನನ್ನು ಮಾಡಿಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. 1994 ರಲ್ಲಿ ನನಗೆ 5-6 ವರ್ಷ ಎಂದರೆ ಸಾಕ್ಷಿಯು ನಾನು 1984 ರಲ್ಲಿ ಜನಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಆ ಸಮಯದಲ್ಲಿ ಹಿಸ್ಸೆ ಮಾಡುವ ಪ್ರಸಂಗ ಏನಿತ್ತು? ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ವಾದಿಯಾದ ನನ್ನ ಚಿಕ್ಕಮ್ಮನಿಗೆ ಮದುವೆ ಮಾಡುವ ಸಲುವಾಗಿ ಜಮೀನು ಹಿಸ್ಸೆ ಆಗುವ ಪ್ರಸಂಗ ಬಂದಿರುತ್ತದೆ ಎಂದು ನುಡಿದಿರುತ್ತಾರೆ.

2. ವಾದಿಯ ಅಜ್ಞಾನಿಯಾಗಿದ್ದು, ಯಾರು ಏನು ಹೇಳಿದರು ಕೇಳುವಂತಹ ಮನಸ್ಥಿತಿ ಉಳ್ಳ ವ್ಯಕ್ತಿ ಎಂದರೆ ಸರಿಯಲ್ಲ. ಊರಿನ 4 ಜನ ಪಂಚರೊಂದಿಗೆ ಹಿಸ್ಸೆ ಮಾಡಿದ ಬಗ್ಗೆ ನಿಮಗೆ ಏನಾದರೂ ನೆನಪಿದಿಯಾ? ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಹಿಸ್ಸೆ ಮಾಡಿದ ಬಗ್ಗೆ ನನಗೆ ನೆನಪಿಲ್ಲ ಆದರೆ ಹಿರಿಯ ಸಮಕ್ಷಮದಲ್ಲಿ ವಾದಿ ಉಪನೊಂದಣಾಧಿಕಾರಿಗಳ ಕಚೇರಿಯಲ್ಲಿ ಜಮೀನು ಮಾಡಿಕೊಟ್ಟಿರುವುದು ನೆನಪಿರುತ್ತದೆ ಎಂದು ನುಡಿದಿರುತ್ತಾರೆ. ಆ ರೀತಿ ಜಮೀನನ್ನು ಬರೆದುಕೊಡುವಾಗ ನಾನು ಇರಲಿಲ್ಲ ಎಂದರೆ ಸಾಕ್ಷಿಯು ನಾನು ಆಗ ಸಣ್ಣವನಿದ್ದೆ ನಮ್ಮ ಹಿರಿಯರು ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ನನ್ನ ತಂದೆ ಬಹಳ ಜಾಣ ಇದ್ದ ಎಂದರೆ ಸರಿ. ವಾದಿಗೆ ಹಿಸ್ಸೆ ಕೊಡಬೇಕೆಂಬ ದುರದ್ದೇಶದಿಂದ ನನ್ನ ತಂದೆ, ಪಂಚರು ಹಾಗೂ ಇತರರು ಸೇರಿ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಉಪನೊಂದಣಾಧಿಕಾರಿಗಳ ಕಚೇರಿಯಲ್ಲಿ ವಾಟ್ನಿ ಪತ್ರ ಸೃಷ್ಟಿ ಮಾಡಿಕೊಂಡು ಅದು ಕಾನೂನು ಬಾಹಿರವಾದ ವಾಟ್ನಿ ಪತ್ರ ಎಂದರೆ ಸರಿಯಲ್ಲ. ಸದರಿ ವಾಟ್ನಿ ಪತ್ರಕ್ಕೆ ನನ್ನ ಚಿಕ್ಕಮನಾದ ವಾದಿ ಸಹಿ ಮಾಡಿಯೇ ಇಲ್ಲ ಎಂದರೆ ಸರಿಯಲ್ಲ. ದಾವಾ ಶೆಡೂಲ್-ಅ ಆಸ್ತಿಗೆ ಸಂಬಂದಪಟ್ಟಂತೆ ಮಾತ್ರ ವಾಟ್ನಿ ಆಗಿರುತ್ತದೆ ಎಂದರೆ ಸರಿ.

3. 1994 ಕಾಲಕ್ಕೆ ದಾವಾ ಆಸ್ತಿ ಎಕರೆಗೆ 2 ರಿಂದ 3 ಲಕ್ಷ ಬೆಲೆ ಬಾಳುತ್ತಿತ್ತು ಎಂದರೆ ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಈಗ ದಾವಾ ಆಸ್ತಿ 15 ಲಕ್ಷ ಮೌಲ್ಯದಾಗಿರುತ್ತದೆ. 1994 ರಲ್ಲಿ ದಾವಾ ಆಸ್ತಿ 50 ಸಾವಿರ ಬೆಲೆ ಬಾಳುತ್ತಿತ್ತು. ವಾಟ್ನಿ ಪತ್ರ ನೊಂದಾದ 2-3 ತಿಂಗಳಲ್ಲಿ ವಾದಿಯ

ಮದುವೆಯಾಗಿರುತ್ತದೆ. ವಾದಿಯ ಸಹಿ ಇಲ್ಲದೇ ದಾವಾ ಆಸ್ತಿ ಸಂಖ್ಯೆ ಎ1, 2, 4 ಕ್ಕೆ ಸಂಬಂದಿಸಿದಂತೆ ದಾಖಲೆಗಳನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಯ ಹಿಸ್ಸೆಯನ್ನು ಎತ್ತಿ ಹಾಕಬೇಕೆಂಬ ದುರುದ್ದೇಶದಿಂದ ನನ್ನ ತಾಯಿ ಹಾಗೂ 3 ನೇ ಪ್ರತಿವಾದಿ ಖೊಟ್ಟಿ ಮಾರಾಟ ಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಗೆ ವಾದಿಯ ಮದುವೆ ಮಾಡಿ ಸಾಲ ಹೆಚ್ಚಾಗಿದ್ದ ಕಾರಣದಿಂದ ಅವರು ದಾವಾ ಶೆಡ್ಯೂಲ್-ಎ4 ಆಸ್ತಿಯಲ್ಲಿ 1 ಎಕರೆ 10 ಗುಂಟೆ ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

4. ಪ್ರತಿವಾದ ಪತ್ರ ಸಲ್ಲಿಸಲು, ಸಾಕ್ಷ ಪ್ರಮಾಣ ಪತ್ರವನ್ನು ಸಲ್ಲಿಸಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನನ್ನ ಪ್ರತಿವಾದ ಪತ್ರದಲ್ಲಿ ಹಾಗೂ ಸಾಕ್ಷ ಪ್ರಮಾಣ ಪತ್ರದಲ್ಲಿ ದಾವಾ ಶೆಡ್ಯೂಲ್-ಎ4 ನೇ ಆಸ್ತಿಯನ್ನು ನನ್ನ ಚಿಕ್ಕಮ್ಮನ ಮದುವೆಗೆ ಮಾಡಿರುವ ಸಾಲದ ಬಗ್ಗೆ ಮಾರಾಟ ಮಾಡಿರುತ್ತಾರೆ ಎಂಬುದರ ಬಗ್ಗೆ ನಾನು ನಮೂದಿಸಿರುತ್ತೇನೆ. ಸದರಿ ಕಾರಣವನ್ನು ಹೊರತುಪಡಿಸಿ ಬೇರೆ ಯಾವುದೇ ಕಾರಣ ನನ್ನ ತಂದೆಗೆ ಜಮೀನನ್ನು ಮಾರಾಟ ಮಾಡಲು ಇರಲಿಲ್ಲ. ದಾವಾ ಆಸ್ತಿಯಲ್ಲಿ ವಾದಿಗೆ ಸಮನಾದ ಹಕ್ಕು ಇದೆ ಸಾಕ್ಷಿಯು ವಾದಿ ಆವಾಗಲೇ ಸಹಿ ಮಾಡಿಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ವಾದಿಗೆ ಹಿಸ್ಸೆ ಇದ್ದರೂ ಕೂಡ ನಮಗೆ ಸಹಿ ಮಾಡಿಕೊಟ್ಟಿರುತ್ತಾರೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಹಾಗೂ ವಾದಿಯ ನಡುವೆ ನಡೆದ ವ್ಯವಹಾರದ ಬಗ್ಗೆ ಮಾಹಿತಿ ಇಲ್ಲದಿದ್ದರೂ ಕೂಡ ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.